# ಕರುಣಾನಿಧಿಯೆ ಈಶ ಅರುಣಗಿರಿಯ ವಾಸ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 07.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 203.
3. **Note:** Lyrics in the above references are same and the Singer has followed these lyrics.

ರಾಗ: ಮುಖಾರಿ ತಾಳ: ಆದಿ

ಕರುಣಾ ನಿಧಿಯೆ ಈಶ ಅರುಣ ಗಿರಿಯ ವಾಸ || ಪ ||

ಮುರನ ವೈರಿಯ ಚರಣ ದಾಸ
ಅರುಣ ರವಿಯ ಕೋಟಿ ಪ್ರಕಾಶ || ಅಪ ||

ಭಸ್ಮ ಧೂಳಿತ ಸರ್ವಾಂಗ ಮತ್ತೆ ತಲೆಯೊಳಿಪ್ಪ ಗಂಗಾ
ವಸ್ತ್ರ ರಹಿತ ದಿಗಂಬರ ಲಿಂಗ
ಕಸ್ತೂರಿ ರಂಗನ ಪಾದದ ಭೃಂಗ || 1 ||

ಮತ್ತೆ ತ್ರಿಪುರ ಸಂಹಾರಿ ಚಿತ್ತಜನಯ್ಯನ ಸೇರಿ
ಹಸ್ತದಿ ಶೂಲ ಕಪಾಲಧಾರಿ
ಕರ್ತೃ ಶ್ರೀ ಹರಿಗೆ ನಿಜವ ತೋರಿ || 2 ||

ನಂದಿಗೆ ನರಗೆ ಬಾಹ್ವ ಚಂದ್ರನು ಶಿರದಲ್ಲಿಪ್ಪ
ಇಂದ್ರನ ತೀರ್ಥ ದಡದಲ್ಲಿಪ್ಪ
ಎಂದೆಂದಿಗೆ ನಮ್ಮ ಪಾಲಿಸುತಿಪ್ಪ || 3 ||

ಬೇಡಿದ ವರಗಳನೀವ ಮತ್ತೆ ಬೇಡಿದ ಭಕ್ತರ ಕಾವ
ಜಡೆಯ ಮರಳ ಶಿರಳು ಭಾವ
ಕೊಂಡಾಡುವರೊಳಗೆಲ್ಲ ಎನ್ನದು ಶಿವ || 4 ||

ಪಾರ್ವತಿ ಪುರದ ನಾಥ ಕರುಣಿಸು ಸಂತತ ದಾತ
ನಾರದ ಪ್ರಿಯ ಪ್ರಖ್ಯಾತ
ಪುರಂದರ ವಿಠಲನ ದೂತ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮುರನ ವೈರಿ** – ವಿಷ್ಣು.

**ಚಿತ್ತಜನಯ್ಯನ ಸೇರಿ** – ಶಿವನ ತ್ರಿಪುರವನ್ನು (ತಾರಕಾಸುರನ ಮಕ್ಕಳಾದ ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿ ಇವರ ಪುರಗಳನ್ನು) ನಿಗ್ರಹಿಸಲು ವಿಷ್ಣುವಿನ (ಚಿತ್ತಜನೆಂದರೆ ಮನ್ಮಥ, ಅವನ ತಂದೆ) ನೆರವನ್ನು ಪಡೆದುಕೊಂಡದ್ದು ಇಲ್ಲಿನ ಸಂದರ್ಭ.

**ಕರ್ತುರ್** – ಕರ್ತೃ.

**ನಿಜವ** – ತನ್ನ ಸ್ವರೂಪವನ್ನು

**ನಂದಿಗೆ...** – ಅರ್ಥವಾಗುವುದಿಲ್ಲ.

**ಇಂದ್ರನ ತೀರ್ಥ** – ಇಲ್ಲಿನ ಪುಷ್ಕರಿಣಿಗೆ ಇಂದ್ರ ತೀರ್ಥವೆಂಬ ಹೆಸರಿದೆ.

**ಮರಳ ಶಿರಳು** – ಗಂಗೆಯು; ನದಿಯ ದಡದಲ್ಲಿ ಮರಳಿರುವುದು ಇಲ್ಲಿನ ಸಂದರ್ಭ. ಗಂಗೆಗೆ ಪುಲಿನವತೀ ಎಂದು ಹೆಸರಿದೆ.

**Classification:** Keerthane
**Ankita:** purandara vittala
**Location:** Tiruvannamalai, Tamil Nadu
**Category:** Shiva Stuti
**Sub-Category:** Vishnu, shiva, indra, karuna, aruna, Parvati, narada, nandi, Chandra, thirta, kasturi, ranga, krishna, gange, shatru, surya, Tiruvannamalai,
**Pravachana:** NA
**Explanation:** NA